**ದಿನಾಂಕಃ 14.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿಯಿಂದ ಸ್ವತಃ</u>**

ನನ್ನ ನಿವೃತ್ತಿಯ ಸಮಯದಲ್ಲಿ ಬಂದ ಹಣ ನನ್ನ ಬ್ಯಾಂಕ್ ಖಾತೆಗೆ ಜಮೆ ಆಗಿತ್ತು ಎಂದರೆ ಸರಿ. ನನಗೆ ಈಗ ತೋರಿಸಿದ ನಿಡಿ-1(ಎ) ಮತ್ತು 1(ಬಿ) ಯಲ್ಲಿ ನಮೂದಿಸಿದ ಚೆಕ್ ಸಂ.389333 ರ ಚೆಕ್ ನಾನು ಈಗ ನೋಡುತ್ತಿರುವ ಚೆಕ್ ಎಂದರೆ ಸರಿ. ಸದರಿ ಚೆಕ್‌ನ್ನು ಸಾಕ್ಷಿ ಒಪ್ಪಿಕೊಂಡ ಸಾಕ್ಷ್ಯಕ್ಕೆ ಮಾತ್ರ **ನಿಪಿ-6** ಎಂದು ಗುರುತಿಸಲಾಯಿತು. ಸದರಿ ಚೆಕ್ ಸಹಿ ವ್ಯತ್ಯಾಸ ಇದೆ ಎಂದು ಹಿಂತಿರುಗಿ ಬಂದಿತು ಎಂದರೆ ಸರಿ. ನಾನು ಈಗ ನೋಡುತ್ತಿರುವ ದಾಖಲೆ ಸದರಿ ಬ್ಯಾಂಕ್ ಹಿಂಬರಹ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲೆಯನ್ನು **ನಿಪಿ-7** ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಚಲನ್ ನಾನು ಚೆಕ್‌ನ್ನು ನಗಧೀಕರಿಸಲು ಹಾಜರುಪಡಿಸಲು ವಾದಿಗೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲೆಯನ್ನು **ನಿಪಿ-8** ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ನಿಪಿ-6 ರಿಂದ 8 ರ ದಾಖಲೆಗಳನ್ನು ಬ್ಯಾಂಕ್‌ನಿಂದ ಪಡೆದು ವಾದಿಗೆ ನೀಡಿರುತ್ತೇನೆ. ದಿನಾಂಕ 22.11.2012 ರಂದು ನಾನು ವಾದಿಗೆ ಯಾವುದೇ ಹಣವನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕ್‌ನಿಂದ ವಾದಿಗೆ ನೀಡಲು ಯಾವುದೇ ಹಣವನ್ನು ಡ್ರಾ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ನನ್ನ ಸ್ವಂತ ಬಳಕೆಗಾಗಿ ಡ್ರಾ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಿನಾಂಕ 17.11.2012 ರಂದು

ನಿವೃತ್ತಿಯಾಗಿರುವುದಾಗಿ ನಮೂದಿಸಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ನಿವೃತ್ತಿಯಾಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ನಾನು ಹಾಜರುಪಡಿಸಿರುವ ನಿಡಿ-1 ರ ಪ್ರಕಾರ ದಿನಾಂಕ 17.11.2012 ರಂದು ನನ್ನ ಬ್ಯಾಂಕ್ ಖಾತೆಗೆ ನನ್ನ ನಿವೃತ್ತಿಯ ಹಣ ಯಾವುದು ಜಮಾ ಆಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 22.11.2012 ರಂದು ವಾದಿಯ ಕಛೇರಿಯಲ್ಲಿ ವರದರಾಜು ಹಾಗೂ ನರಸಿಂಹಮೂರ್ತಿ ರವರ ಸಮಕ್ಷಮ ಹಣವನ್ನು ವಾದಿಗೆ ನೀಡಿರುತ್ತೇನೆ. ವರದರಾಜು ಹಾಗೂ ನರಸಿಂಹಮೂರ್ತಿ ಎನ್ನುವವರು ಸಾಕ್ಷ್ಯ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ವರದರಾಜು ಎನ್ನುವವರು ಮೃತ ಪಟ್ಟಿದ್ದಾರೆ. ನರಸಿಂಹಮೂರ್ತಿ ಎನ್ನುವವರು ಮೃತ ಪಟ್ಟಿದ್ದಾರೆ ಎಂದರೆ ಸರಿಯಲ್ಲ. ಕೇಸಿನ ವಿಚಾರವಾಗಿ ವರದರಾಜು ಹಾಗೂ ನರಸಿಂಹಮೂರ್ತಿ ಎನ್ನುವವರ ಜೊತೆ ನಾನು ವಾದಿಯ ಕಛೇರಿಗೆ ಬಂದಿದ್ದು ಆ ದಿನ ನಾನು ವಾದಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಸ್ವಂತ ಕಛೇರಿಯಲ್ಲಿ ಇಬ್ಬರು ಹಿರಿಯ ವಕೀಲರನ್ನು ಇಟ್ಟುಕೊಂಡು ವಕೀಲ ವೃತ್ತಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನುಡಿಯುತ್ತಾರೆ ಅವರಿಗೆ ಆಗ ಯಾರು ಕಿರಿಯ ವಕೀಲರು ಇರಲಿಲ್ಲ. ವಾದಿಗೆ ಆಗ ಸ್ವಂತ ಕಛೇರಿಗೆ ಇತ್ತು ಎಂದರೆ ಸರಿ. ವಾದಿಯ ಬಳಿ ಹಲವು ಕೇಸುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ 2 ಲಕ್ಷ ರೂ. ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ನನ್ನ ಬಳಿ 2 ಲಕ್ಷ ರೂ. ಹಣವನ್ನು ಕೇಳಿರಲಿಲ್ಲ ಹಾಗೂ ನಾನು ವಾದಿಗೆ ಅಷ್ಟು ಹಣವನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 22.11.2012 ರಂದು

ನಾನು ವಾದಿಯ ಕಛೇರಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಜೊತೆ ಯಾವುದೇ ಸಾಕ್ಷಿಗಳು ವಾದಿಯ ಕಛೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ವರದರಾಜು ಎನ್ನುವವರು ಆನೇಕಲ್ ಗೆ ವರ್ಗಾವಣೆ ಆದಾಗ ಮೂಲ ದಾವೆ ಸಂ.1097/2007 ರ ಪ್ರಕರಣವನ್ನು ವಾದಿಗೆ ನೀಡಿದ್ದು ಸದರಿ ದಾವೆಯ ವಿಚಾರವಾಗಿ ಅವರು ವಾದಿಯ ಕಛೇರಿಗೆ ಆಗಾಗ್ಗ ಬರುತ್ತಿದ್ದು ನಾನು ಅವರ ಜೊತೆ ಬರುತ್ತಿದ್ದೆನು ಎಂದರೆ ಸರಿ. ನಾನು ವಾದಿಗೆ 2 ಲಕ್ಷ ರೂ. ಹಣವನ್ನು ನೀಡಿದಾಗ ಅವರಿಂದ ನಾನು ಯಾವುದೇ ದಾಖಲಾತಿಗಳನ್ನು ಬರೆಸಿಕೊಂಡಿಲ್ಲ. ನಾನು ಅವರಿಂದ ಚೆಕ್, ಆನ್ ಡಿಮ್ಯಾಂಡ್ ಪ್ರೊನೋಟ್ ನಂತರ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ವಾದಿ ನನಗೆ ಹಣ ನೀಡುವಂತೆ ಕೇಳಿ ವಾದಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಾನು ಯಾವಾಗ ಯಾರ ಜೊತೆ ಹೋಗಿ ಪ್ರತಿವಾದಿಯ ಬಳಿ ಹಣ ಕೇಳಿರುತ್ತೇನೆ ಎಂದು ನನ್ನ ಉತ್ತರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ವಾದಿಗೆ 2 ಲಕ್ಷ ರೂ. ಹಣವನ್ನು ಸಾಲವಾಗಿ ಕೊಟ್ಟಿದರೆ ಅವರಿಂದ ದಾಖಲಾತಿಗಳನ್ನು ಪಡೆದುಕೊಳ್ಳುತ್ತಿದ್ದೆನು ಹಾಗೂ ಅವರು ಹಣ ಕೊಡದೇ ಇದ್ದಾಗ ನಾನು ಅವರಿಗೆ ನೋಟೀಸನ್ನು ಕೊಡುತ್ತಿದ್ದೆನು ಎಂದರೆ ಸಾಕ್ಷಿ ನುಡಿಯುತ್ತಾರೆ ನಂಬಿಕೆಯ ಮೇಲೆ ನಾನು ವಾದಿಗೆ ಹಣ ನೀಡಿರುತ್ತೇನೆ. ನನಗೆ ವಾದಿಯು 2012 ಕ್ಕೂ ಸುಮಾರು 15 ವರ್ಷಗಳ ಹಿಂದಿನಿಂದ ಪರಿಚಯಸ್ಥರು. ವಾದಿಯು ಜರಗನಹಳ್ಳಿಯಲ್ಲಿ ಆಗ ವಾಸ ಇದ್ದರು. ಅವರ ಮನೆಯ ವಿಳಾಸ ಮನೆ ಸಂ.27, ಮೊದಲನೇ ಮಹಡಿ. 2002 ರಲ್ಲಿ ವಾದಿಯು ಜರಗನಹಳ್ಳಿಯಲ್ಲಿ ವಾಸ ಇರಲಿಲ್ಲ,

ಬನಶಂಕರಿ 2 ನೇ ಹಂತದಲ್ಲಿ ಅವರ ಸಹೋದರರ ಜೊತೆ ವಾಸ ಇದ್ದರು ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ವಾದಿಗೆ ಹಣ ನೀಡುವಾಗ ಅವರು ಜರಗನಹಳ್ಳಿಯಲ್ಲಿ ವಾಸ ಇದ್ದರು. ಜರಗನಹಳ್ಳಿಯಲ್ಲಿರುವ ದೇವಸ್ಥಾನದ ಹಿಂಭಾಗದಲ್ಲಿ ವಾದಿಯು ವಾಸ ಇದ್ದರು. ಅದು ಯಾವ ದೇವಸ್ಥಾನ ಹಾಗೂ ರಸ್ತೆಯ ಸಂಖ್ಯೆ ನನಗೆ ಗೊತ್ತಿಲ್ಲ. ವಾದಿಯು ಜರಗನಹಳ್ಳಿಯಲ್ಲಿ ವಾಸ ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 30.12.2014 ರಂದು ವಾದಿಯು ನನಗೆ 2 ಲಕ್ಷ ರೂ. ಹಣವನ್ನು ಚೆಕ್ ಮೂಲಕ ಹಾಗೂ 3 ಲಕ್ಷ ರೂ. ಹಣವನ್ನು ನಗದು ಮೂಲಕ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ನೀಡಿದ್ದ ನಿಪಿ-6 ರ ಚೆಕ್‌ನ್ನು ಪಡೆದು ವಾದಿಯಿಂದ ನೀಡಿದ 2 ಲಕ್ಷ ರೂ. ಹಣವನ್ನು ದಿನಾಂಕ 30.12.2014 ರಂದು ವಾದಿಯ ಖಾತೆಯಿಂದ ಡ್ರಾ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ನಿಡಿ-1 ರ ಪುಟ ಸಂ.2 ರಲ್ಲಿ ನಿಪಿ-5 ರಲ್ಲಿ ದಿನಾಂಕ 30.12.2014 ರ ಮುಂದೆ ನಮೂದಾಗಿರುವ ಟಿ.ಬಿ.ಪಂಚಯ್ಯ ಎಂದರೆ ಸಾಕ್ಷಿ ನುಡಿಯುತ್ತಾರೆ ಆ ಹೆಸರು ನನ್ನದಿರಬಹುದು ಆದರೆ ನಾನು ಆ ಚೆಕ್‌ನ್ನು ಪಡೆದಿಲ್ಲ. ನಿಡಿ-1 ರಲ್ಲಿ ನನ್ನ ಹೆಸರು ತಿಮ್ಮಾಪುರ ಬಸವಲಿಂಗಯ್ಯ ಪಂಚಯ್ಯ ಎಂದು ನಮೂದು ಇದೆ ಎಂದರೆ ಸರಿ. ನಿಪಿ-6 ನ್ನು ಸಲ್ಲಿಸುವಾಗ ಯಾವ ಕಾರಣಕ್ಕೆ ಅದರಲ್ಲಿಯ ಸಹಿ ವ್ಯತ್ಯಾಸ ಆಯಿತು ಎಂದರೆ ಸಾಕ್ಷಿ ನುಡಿಯುತ್ತಾರೆ ಸಹಿ ವ್ಯತ್ಯಾಸ ಆಗಲೀ ಎಂದು ಅದನ್ನು ವಾದಿ ಹಾಜರುಪಡಿಸಿರುತ್ತಾರೆ. ನಾನು ವಾದಿಯಿಂದ ಪಡೆದ 5 ಲಕ್ಷ ರೂ. ಹಣಕ್ಕೆ ಚೆಕ್

ತಂದು ಕೊಡುತ್ತೇನೆ ಎಂದು ಹೇಳಿದ ಕಾರಣ ನಿಪಿ-6 ರ ಚೆಕ್ Stock Payment ಆಗಿತ್ತು ಎಂದರೆ ಸರಿಯಲ್ಲ. ನಾನು ವಾದಿಗೆ ಹಣ ಪಾವತಿಸುವ ಬಾಬ್ತು ನಿಪಿ-1 ಮತ್ತು 2 ದಾಖಲಾತಿಗಳನ್ನು ಮಾಡಿಕೊಟ್ಟಿದ್ದು ನಂತರ ವಾದಿಗೆ ಹಣ ತಂದು ಕೊಡುತ್ತೇನೆ ಎಂದು ಹೇಳಿದ ಕಾರಣ ಸದರಿ ಚೆಕ್ Stock Payment ಆಗಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ವಾದಿಯ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.